(ಶ್ರೀ ಕಡಿದಾಳ್ ಮಂಜಪ್ಪ.)

ಸರ್ಕಾರದವರು ಕೊಟ್ಟಿರತಕ್ಕಂಥ ಹುಕ್ಕುಂಗಳಿಗನುಸಾರವಾಗಿ ಚಾಚೂ ತಪ್ಪದೆ ನಡೆಸಿಕೊಂಡು ಬರಬೇಕೆಂದು ಅವರಿಗೆಲ್ಲಾ ತಿಳಿವಳಿಕೆ ಕೊಡಲಾಗಿದೆ; ಮತ್ತು ಹಾಗೆ ನಡೆಸಬೇಕೆಂಬ ಬಗ್ಗೆ ಒಂದು ಸರ್ಕಾರಿ ಹುಕುಮನ್ನೇ ಮಾಡಲಾಗಿದೆ.

ಶ್ರೀ ಪಿ. ಎ. ತಿಮ್ಮಪ್ಪಗೌಡ.—ಈ ಹುಕುಮ್ಮಿಗನುಸಾರವಾಗಿ P. S. C. ಅವರು ಚಾಚೂ ತಪ್ಪದೆ ನಡೆಸಿಕೊಂಡು ಬರುತ್ತಿದ್ದಾರೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಈ ಹುಕುಮನ್ನು ಇತ್ತೀಚೆಗೆ ಹೊಸದಾಗಿ ಸಾದರು ಮಾಡಲಾಗಿದೆ.

Nonavinakere Tank Bund (necessity to widen).

Q.— 218. **Sri T. G. THIMME GOWDA** (Tiptur).—

Will the Government be pleased to state:—

(*a*) whether it is not a fact that the urgency of widening the tank-bund of Nonavinakere tank was brought to their notice and representations made as early as May 1952;

(*b*) whether it is not a fact that there was even a proposal mooted to divert the road (Tiptur-Turuvekere) by acquiring certain lands and a survey also made;

(*c*) whether any further measures have been taken to meet the urgency since then and if so, what are they;

(*d*) whether they would undertake the work of widening the road on the bund at least during the current financial year?

A.—**Sri Kadidal MANJAPPA** (Minister for Revenue and Public Works).—

(*a*) Yes.

(*b*) Yes.

(*c*) Yes. Estimates have been prepared both for widening the road on the tank bund and for deviating the road lower down the bund through the atchkat lands.

(*d*) The estimates are under scrutiny.

ಶ್ರೀ ಟಿ. ಜಿ. ತಿಮ್ಮೇಗೌಡ.—ನೊಣವಿನಕೆರೆಯ ಏರಿಯನ್ನು ಅಗಲ ಮಾಡತಕ್ಕ ನಂಬಂಧದಲ್ಲಿ ತಯಾರಿಸಿರತಕ್ಕ ಅಂದಾಜಿದ ಮೊಬಲಗು ಎಷ್ಟು?

ಶ್ರೀ ಕಡಿದಾಳ್ ಮಂಜಪ್ಪ.—ಸುಮಾರು ಒಂದು ಲಕ್ಷ 29 ಸಾವಿರ ರೂಪಾಯಿಗಳು.

ಶ್ರೀ ಟಿ. ಜಿ. ತಿಮ್ಮೇಗೌಡ.—ಈ ವರ್ಷ ಕೆಲಸವನ್ನು ಪ್ರಾರಂಭಿಸಲು ಏಕೆ ಕಾರ್ಯಕ್ರಮಗಳನ್ನು ಕೈಗೊಳ್ಳಲಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಆ ಎಸ್ಟಿಮೇಟನ್ನು ಇನ್ನೂ ಪರಿಶೀಲನೆ ಮಾಡಲಾಗುತ್ತಿದೆ. ಅದರಿಂದ ಕೆಲಸವನ್ನು ಪ್ರಾರಂಭಿಸಲು ಸಾಧ್ಯವಾಗಿಲ್ಲ.

ಶ್ರೀ ಟಿ. ಜಿ. ತಿಮ್ಮೇಗೌಡ.—ಮುಂದಿನ ಸಾಲಿನಲ್ಲಾದರೂ ತಾವು ಈ ಕೆಲಸವನ್ನು ಕೈಗೊಳ್ಳುವಿರಾ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರವನ್ನು ನಾನು ಈಗ ನಿರ್ಧರವಾಗಿ ಹೇಳುವುದಕ್ಕಾಗುವುದಿಲ್ಲ.

Assistant Engineers (filling up of vacancies from 1944.)

Q.—430. **Sri N. HUCHMASTHY GOWDA** (Huliyurdurga).—

Will the Government be pleased to state:—

(*a*) the number of vacancies of Assistant Engineers from 1944 up-to-date;

(*b*) the number of supervsors promoted as Assistant Engineers from the year 1944;

(*c*) the number of probationers taken during this period;

(*d*) the number of supervisors now in charge of sub-divisions?

A.—**Sri Kadidal MANJAPPA** (Minister for Revenue and Public Works).—

(*a*) 119
(*b*) 115
(*c*) 61
(*d*) 23

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ಅಸಿಸ್ಟೆಂಟ್ ಇಂಜಿನಿಯರುಗಳನ್ನು ಕೆಲಸಕ್ಕೆ ತೆಗೆದುಕೊಳ್ಳುವುದರ ಬಗ್ಗೆ ಹಿಂದೆ ಜಾರಿಮಾಡಲಾಗಿದ್ದ ಆಜ್ಞೆಯೇ ಈಗಲೂ ಜಾರಿಯಲ್ಲಿರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಆದರೆ ಈ ಬಗ್ಗೆ ಮತ್ತೊಂದು ಹುಕುಮನ್ನು 1953ರಲ್ಲಿ ಹೊರಡಿಸಲಾಗಿದೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ಈಗ ತಾವು ಹೊಸದಾಗಿ ಹೊರಡಿಸಿರುವಂಥ ಆಜ್ಞೆ ಸಹ ಹಿಂದಿನ ಆಜ್ಞೆಗೆ ಅನುಗುಣವಾಗಿಯೇ ಇದೆಯಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ತಾವು ಇಲ್ಲಿ (ಎ) ಪ್ರಶ್ನೆಗೆ ಉತ್ತರವಾಗಿ 119 ಸ್ಥಾನಗಳೆಂದು ಹೇಳಲಾಗಿದೆ. ಇಷ್ಟೇ ಸ್ಥಾನಗಳೋ ಅಥವಾ ಇನ್ನೂ ಏನಾದರೂ ಇದರಲ್ಲಿ ತಪ್ಪು ಬಿದ್ದಿದೆಯೋ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಮುದ್ರಣ ದೋಷದಿಂದ 199 ಎಂಬುದಕ್ಕೆ ಬದಲಾಗಿ 119 ಎಂದು ತಪ್ಪಾಗಿ ಬಿದ್ದಿದೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡ.—ಹೀಗೆ ಖಾಲಿ ಬಿದ್ದಿದ್ದ 199 ಸ್ಥಾನಗಳನ್ನು ಭರ್ತಿ ಮಾಡುವಾಗ ಇದರಲ್ಲಿ ಶೇಕಡಾ 50ರಷ್ಟು ಸ್ಥಾನಗಳನ್ನು ಬಿಟ್ಟಿ ಕೊಡುವುದರ ಮೂಲಕ ಭರ್ತಿಮಾಡಬೇಕೆಂದು ಹಿಂದಿನ ಸರ್ಕಾರಿ ಆಜ್ಞೆಯಲ್ಲಿ ಹೇಳಲಾಗಿದ್ದು ತಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು